# ಹೊಳೆನರಸೀಪುರದ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ.

## ಕ್ರಿ.ಮಿಸ್.ನಂ. 102 /18

ಸಾಕ್ಷಿಯ ಹೆಸರು : ಬೇಬಿ ಪಿ.ಡಬ್ಲ್ಯೂ- 1
ಗಂಡನ ಹೆಸರು : ಸುರೇಶ್
ವಯಸ್ಸು : 27 ಪ್ರಮಾಣೀಕರಿಸಿದ ದಿಃ 01-03-2019
ವೃತ್ತಿ : ಕೂಲಿ ಕೆಲಸ
ವಾಸ : ಹೊಳೆನರಸೀಪುರ

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಕೆ.ಆರ್ ವಕೀಲರಿಂದ

ಚಿಕ್ಕಮಂಗಳೂರು ಜಿಲ್ಲೆಯ ತರಿಕೆರೆ ತಾಲ್ಲೂಕಿನ ಮಳಲಿ ಚಿನ್ನೇನಹಳ್ಳಿ ನನ್ನ ಮೂಲತಹ ಗ್ರಾಮ. ಅಲ್ಲಿ ನಮಗೆ ಸೇರಿದ ಒಂದು ಚಿಲ್ಲರೆ ಅಂಗಡಿ ಇತ್ತು. ಎದುರುದಾರ ಲಾರಿ ಚಾಲಕರಾಗಿದ್ದು ಸದರಿ ಅಂಗಡಿಗೆ ಆಗಾಗ ಬರುತ್ತಿದ್ದರಿಂದ ನಮ್ಮ ನಡುವೆ ಪರಿಚಯವಾಗಿ ಪ್ರೇಮಾಂಕುರವಾಗಿರುತ್ತದೆ. ನಾನು ಮದುವೆಗೆ ಮುಂಚೆಯೇ ಗರ್ಬಿಣಿ ಆಗಿದ್ದೆ. ನಂತರ ನನ್ನ ಮತ್ತು ಎದುರುದಾರರ ಮನೆಯವರು ಒಪ್ಪಿ ದಿಃ 26.12.2015 ರಂದು ನಮ್ಮ ಮದುವೆಯನ್ನು ಭಧ್ರಾವತಿಯ ಮೈಲಾರಲಿಂಗಸ್ವಾಮಿ ದೇವಸ್ಥಾನದಲ್ಲಿ ಮಾಡಿರುತ್ತಾರೆ. ಮದುವೆಯ ಸಮಯದಲ್ಲಿ ನಮ್ಮ ಮನೆಯವರು ಎದುರುದಾರನಿಗೆ ವರದಕ್ಷಿಣೆಯಾಗಿ 1 ಲಕ್ಷ ರೂ. ಹಣ ಮತ್ತು 150 ಗ್ರಾಂ ಚಿನ್ನ ನೀಡಿದ್ದಾರೆ. ನಂತರ ಮದುವೆಯಾದ 3 ತಿಂಗಳಿಗೆ ಅಂದರೆ ದಿಃ 30.03.2016 ರಂದು 2 ನೇ ಅರ್ಜಿದಾರ ಜನಿಸಿರುತ್ತಾರೆ. ಎದುರುದಾರ ತಮ್ಮ ಗ್ರಾಮವಾದ ಗಾಳಿಪುರಕ್ಕೆ ನನ್ನನ್ನು ಕರೆದುಕೊಂಡು ಬಂದು ಚನ್ನಾಗಿ ನೋಡಿಕೊಂಡು ಸಂಸಾರ ಮಾಡಿರುತ್ತಾರೆ. ಅನಂತರ ಎದುರುದಾರ ನನ್ನನ್ನು ಹೊಡೆಯುವುದು ಮತ್ತು ಅವಾಚ್ಯ ಶಬ್ದಗಳಿಂದ ಬೈಯುವುದು ಮಾಡಿರುತ್ತಾರೆ . ಅದನ್ನು ಪ್ರಶ್ನಿಸಲಾಗಿ ಎದುರುದಾರ ನನ್ನನ್ನು 2 ನೇ ಆರ್ಜಿದಾರರೊಂದಿಗೆ ಮನೆಯಿಂದ ಹೊರಗೆ ಹಾಕಿದ್ದಾರೆ. ಸದರಿ ವಿಷಯವನ್ನು ನಾನು ತವರು ಮನೆಗೆ ತಿಳಿಸಿದಾಗ ನಮ್ಮ ಮನೆಯವರು ಮತ್ತು ಗ್ರಾಮಸ್ಥರು ಬಂದು ಪಂಚಾಯತಿ ಮಾಡಿ ದಿಃ 20.05.2016 ರಂದು ತರಿಕೆರೆಯ ನೊಂದನಾಧೀಕಾರಿಗಳ ಮುಂದೆ ನಮ್ಮ ವಿವಾಹ ನೊಂದಣಿ ಮಾಡಿಸಿ ಎದುರುದಾರಿನಿಗೆ ಬುದ್ದಿ ಹೇಳಿ ಕಳುಹಿಸಿದ್ದರು. ನಂತರ ಎದುರುದಾರ ಹೊನಪುರ ಕಾಲುವೆಕೆರೆ ಬಿದಿಯಲ್ಲಿ ಬಾಡಿಗೆ ಮನೆ ಮಾಡಿ ಕೆಲವು ದಿನ ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ. ನಂತರ ಎದುರುದಾರನಿಗೆ ಕೆ.ಎಸ್.ಆರ್.ಟಿ.ಸಿಯಲ್ಲಿ ಚಾಲಕ ಕಂ

ನಿರ್ವಾಹಕನಾಗಿ ಕೆಲಸ ಸಿಕ್ಕಿದ್ದು ಅವರು ಗುಂಡ್ಲುಪೇಟೆಗೆ ಕೆಲಸಕ್ಕೆ ಹೋದವರು 2-3 ತಿಂಗಳು ಬರದಿದ್ದ ಕಾರಣ ನಾನು ಮನೆ ಖಾಲಿ ಮಾಡಿಕೊಂಡು ಎದುರುದಾರನ ಗಾಳಿಪುರದ ಮನೆಗೆ ಹೋಗಿದ್ದ. ಸದರಿ ಮನೆಯಲ್ಲಿ ನೋಡಲಾಗಿ ಒಬ್ಬ ಹುಡುಗಿ ಇದ್ದು ಅವರನ್ನು ವಿಚಾರಿಸಲಾಗಿ ಎದುರುದಾರ 2 ನೇ ಮದುವೆ ಆಗಿರುವುದು ತಿಳಿದು ನಾನು ತವರು ಮನೆಗೆ ವಿಷಯ ತಿಳಿಸಿರುತ್ತೇನೆ. ಆಗ ನಮ್ಮ ಮನೆಯವರು ಬಂದು ಪಂಚಾಯತಿ ಮಾಡಲಾಗಿ ಎದುರುದಾರ ಇಬ್ಬರೂ ಹೆಂಡತಿಯರನ್ನು ಸಹ ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದರಿಂದ ನಾನು ಅವರ ಗಾಳಿಪುರದ ಮನೆಯಲ್ಲಿಯೇ ಉಳಿದಿರುತ್ತೇನೆ. ನಂತರ ಎದುರುದಾರ ತನ್ನ 2 ನೇ ಹೆಂಡತಿಯೊಂದಿಗೆ ಬೇರೆ ಮನೆ ಮಾಡಿಕೊಂಡು ವಾಸ ಇರುವುದು ತಿಳಿದು ನಾನು ಆತನಿಗೆ ಫೋನ್ ಮೂಲಕ ಕರೆ ಮಾಡಿ ವಿಚಾರಿಸಿದಾಗ ಆತ ನನಗೆ ನೀನು ಬೇಡ ನಿಮ್ಮ ತವರು ಮನೆಗೆ ಹೋಗು ನೀನು ಹಟ ಮಾಡಿದರೆ ನಿನ್ನನ್ನು ಮತ್ತು ಮಗುವನ್ನು ಸಾಯುಸುತ್ತೇನೆ ಎಂದು ಹೆದರಿಕೆ ಹಾಕಿರುತ್ತಾರೆ. ನಾನು ನಂತರ ಸ್ವಲ್ಪ ದಿನ ಗಾಳಿಪುರದಲ್ಲಿ ಕೂಲಿ ಮಾಡಿ ಜೀವನ ಮಾಡಿದ್ದು ಅನಂತರ ಈಗ ಹೊನಪುರದಲ್ಲಿ ಮನೆ ಮಾಡಿಕೊಂಡು ವಾಸವಾಗಿದ್ದೇನೆ. ಎದುರುದಾರ ನನ್ನ ಮತ್ತು ಮಗುವಿನ ಜೀವನಕ್ಕೆ ಯಾವುದೆ ವ್ಯವಸ್ಥೆ ಕಲ್ಪಿಸಿಕೊಟ್ಟಿಲ್ಲ.

ಎದುರುದಾರ ಸಾಕಷ್ಟು ಜಮೀನು ಹೊಂದಿದ್ದು ಅದರಿಂದ ಸಾಕಷ್ಟು ಆದಾಯ ಪಡೆಯುತ್ತಾರೆ ಮತು ಕೆಎಸ್‌ಆರ್‌ಟಿಸಿಯಲ್ಲಿ ಕರ್ತವ್ಯ ಮಾಡುತ್ತಿದ್ದು ಅದರಿಂದ ಸಂಬಳ ಪಡೆಯುತ್ತಿದ್ದಾರೆ. ಆದ್ದರಿಂದ ಎದುರುದಾರನಿಂದ ಅರ್ಜಿಯಲ್ಲಿ ಕೇಳಿದ ಹಾಗೆ ಜೀವನಾಂಶ ಕೊಡಿಸುವಂತೆ ಕೇಳಿಕೊಳ್ಳುತ್ತೇನೆ.

ವಿವಾಹ ನೊಂದಣಿ ಪತ್ರವನ್ನು ನಿಪಿ 1, ಜನನ ಪ್ರಮಾಣ ಪತ್ರವನ್ನು ನಿಪಿ 2, 6 ಛಾಯಾ ಚಿತ್ರಗಳನ್ನು ನಿಪಿ 3 ರಿಂದ 8 ಹಾಗೂ 1 ಸಿಡಿಯನ್ನು ನಿ.ಪಿ 9, ವಂಶವೃಕ್ಷದ ಪ್ರಮಾಣ ಪತ್ರವನ್ನು ನಿ.ಪಿ 10, ಎದುರುದಾರನ ವೇತನ ಪಟ್ಟಿಯನ್ನು ನಿ.ಪಿ 11, 10 ಪಹಣಿ ಪ್ತ್ರಿಕೆಗಳನ್ನು ನಿ.ಪಿ 12 ರಿಂದ 21 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ.

ಸಿವಿಲ್ ಜಡ್ಜ್, ಹೊಳೆನರಸೀಪುರ